ಆ) 3 ಸಾವಿರ ರೂಪಾಯಿಗಳಲ್ಲದೇ ಗ್ರೌಂಡಿಂಗ್, ಕೇಬಲ್, ಮನೆಯೊಳಗೆ ವಿದ್ಯುತ್ ವೈರು ಮತ್ತು ಸ್ವಿಚ್‌ಗಳನ್ನು ಅಳವಡಿಸಲು ಸುಮಾರು 3050 ರೂ.ಗಳನ್ನು ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸರ್ಕಾರದಿಂದ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾದ ನಿವೇಶನದಲ್ಲಿ ಕಟ್ಟಲಾದ ಮನೆಗಳಿಗೆ ವಿದ್ಯುಚ್ಛಕ್ತಿ ಪಡೆಯಲು ಮಂಡಳಿಯಿಂದ ಕೇವಲ 200 ರೂ.ಗಳನ್ನು ತೆಗೆದುಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಸುಮಾರು 300 ಮನೆಗಳಿಗೆ ವಿದ್ಯುಚ್ಛಕ್ತಿ ನೀಡಲು ಎಲ್ಲಾ ಸಾಮಗ್ರಿಗಳು ಸೇರಿ ಸುಮಾರು 3,00,000 (ಮೂರು ಲಕ್ಷ) ತಗಲಬಹುದೆಂದು ತಜ್ಞರ ವರದಿ ಇದಾಗ್ಯೂ ಮನೆಗೆ 1000 ರೂ. ತೆಗೆದುಕೊಳ್ಳುವ ಬದಲು 3000 ರೂ. ತೆಗೆದುಕೊಳ್ಳುತ್ತಿರುವ ಉದ್ದೇಶವೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಆ) ಹೌದು.

ಆ) ಗ್ರೌಂಡಿಂಗ್, ಕೇಬಲ್, ಮನೆಯೊಳಗೆ ವಿದ್ಯುತ್ ವೈರು ಮತ್ತು ಸ್ವಿಚಗಳನ್ನು ಅಳವಡಿಸುವ ಬಗ್ಗೆ ಮಾಡುವ ಖರ್ಚು ಗ್ರಾಹಕರಿಗೆ ಸಂಬಂಧಿಸುತ್ತದೆ. ಮತ್ತು ಈ ಮೊತ್ತವು ಗ್ರಾಹಕರು ಉಪಯೋಗ ಮಾಡುವ ಸಾಮಾನುಗಳನ್ನು ಅವಲಂಭಿಸುತ್ತದೆ.

ಇ) ಪ್ರಾಧಿಕಾರದಿಂದ ಮಂಜೂರಾತ ದಿನಿವೇಶನಗಳಲ್ಲಿ ಆಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು (ಇನ್ ಪ್ರಾಸ್ಟಕ್ಚರ್) ಸರ್ಕಾರವೇ ಅಥವಾ ನಗರಾಭಿವೃದ್ಧಿ ಪ್ರಾಧಿಕಾರವೇ ಕಲ್ಪಿಸುತ್ತದೆ. ಆದ್ದರಿಂದ ಠೇವಣಿ ಹಣ ಕಡಿಮೆ ಇರುತ್ತದೆ.

ಈ) ಸದರೀ ಬಡಾವಣೆಗಳು ಅನಧಿಕೃತವಾಗಿರುವುದರಿಂದ ಮೂಲಭೂತ ಸೌಲಭ್ಯ (ಇನಪ್ರಾಸ್ಟಕ್ಚರ್)ವನ್ನು ಕಲ್ಪಿಸಲು ಸಗಲುವ ಖರ್ಚನ್ನು ಗ್ರಾಹಕರುಗಳೇ ನೇರವಾಗಿ ಭರಿಸಬೇಕಾಗುತ್ತದೆ. ಇದರ ಸಾಧಕ ಭಾದಕಗಳನ್ನು ಸಮಗ್ರವಾಗಿ ಪರಿಶೀಲಿಸಿ ಈ 28 ಬಡಾವಣೆಗಳಲ್ಲಿರುವ ಸುಮಾರು 12 ಸಾವಿರ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ವ್ಯವಸ್ಥೆ ಮಾಡಲು ಪ್ರತೀ ಸಾವಿರಕ್ಕೆ ತಗಲುವ ವೆಚ್ಚ ರೂ. 3000ಗಳಾಗುವುದೆಂದು ವೈಜ್ಞಾನಿಕ ರೀತಿಯಲ್ಲಿ ಲೆಕ್ಕಾಚಾರ ಮಾಡಲಾಗಿದೆ.

ಪುತ್ತೂರಿನ ಬೈಪಾಸ್ ರಸ್ತೆಯ ಕಾಮಗಾರಿ

355 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಪುತ್ತೂರಿನ ನಿಯೋಜಿತ ಬೈಪಾಸ್ ರಸ್ತೆಯ ಕಾಮಗಾರಿ ಯಾವ ಹಂತದಲ್ಲಿದೆ; ಹಾಗೂ ಯಾವ ದಿನಾಂಕದೊಳಗೆ ಈ ಕಾರ್ಯವನ್ನು ಪೂರ್ತಿಗೊಳಿಸಲಾಗುವುದು?

ಆ) ಈ ಕಾಮಗಾರಿ ಪೂರ್ತಿಯಾಗಲು ಇನ್ನೂ ಎಷ್ಟು ಹಣ ಬೇಕಾಗುವುದು? ಈ ವರ್ಷ

ಬಿಡುಗಡೆ ಮಾಡಿದ ಹಣವೆಷ್ಟು ? ಹೆಚ್ಚಿನ ಹಣ ಬಿಡುಗಡೆಗೆ ಕೋರಿ ಬರೆದ ಪತ್ರದ ಬಗ್ಗೆ ಸರ್ಕಾರದ ನಿಲುವೇನು ?

ಇ) *ಈ ಕಾಮಗಾರಿಯಲ್ಲಿ ಬರುವ ಎರಡು ಸೇತುವೆಗಳ ಕಾಮಗಾರಿ ಬಗ್ಗೆ ಟೆಂಡರು ಕರೆಯಲಾಗಿದೆಯೆ; ಕರೆಯದಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಪುತ್ತೂರು ಬೈಪಾಸ್ ರಸ್ತೆಯಲ್ಲಿ 2ನೇ ಸೇತುವೆಯ ಹಾಗೂ ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾಗಿರುವ ಭೂಸ್ವಾಧೀನವಾಗಿ ಬೇಕಾಗಿರುವ ಸುಮಾರು 50 ಮೀಟರ್ ಉದ್ದದ ಭಾಗದ ಕಾಮಗಾರಿಯನ್ನು ಹೊರತುಪಡಿಸಿ, ಉಳಿದ ಭಾಗದ ಕೆಲಸದ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ.

ಆ) ತಾಂತ್ರಿಕ ಮಂಜೂರಾತಿಯಾದ ಅಂದಾಜು 85.00 ಲಕ್ಷ ರೂ.ಗಳಾಗುತ್ತದೆ. ಇದುವರೆವಿಗೆ 33.00 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 10.85 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಕಾಮಗಾರಿ ಪೂರ್ತಿ ಆಗಲು ಇನ್ನೂ ಸುಮಾರು 52.00 ಲಕ್ಷ ರೂ.ಗಳು ಅಗತ್ಯವಿದೆ. ಕಾಮಗಾರಿಯನ್ನು 1996-97ನೇ ಸಾಲಿನಲ್ಲಿ ಪೂರ್ತಿಗೊಳಿಸುವ ಕಾರ್ಯಕ್ರಮವಿರುತ್ತದೆ. ಆದ್ದರಿಂದ, ನಿಗಧಿತ ಸಮಯಕ್ಕೆ ಕಾಮಗಾರಿ ಮುಗಿಸುವುದಕ್ಕೆ ಹಣದ ಲಭ್ಯತೆಯನ್ನು ಅನುಸರಿಸಿ, ಅನುದಾನದ ವ್ಯವಸ್ಥೆಯನ್ನು ಮಾಡಲಾಗುವುದು.

ಇ) ಈ ಕಾಮಗಾರಿಯಲ್ಲಿ ಬರುವ ಸೇತುವೆ ಕಾಮಗಾರಿಗಳಿಗೆ ಈಗಾಗಲೇ ಟೆಂಡರು ಕರೆಯಲಾಗಿದೆ. (19.10.1995 ಗುತ್ತಿಗೆ ಸ್ವೀಕರಿಸುವ ದಿನಾಂಕ).

ಬಂಜಾರು ತಾಂಡಾಗಳ ವಿದ್ಯುದೀಕರಣ

356 - ಶ್ರೀ ರಾಜ ವೆಂಕಟಪ್ಪ ನಾಯಕ್ (ಸೋಲಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಸೋಲಾಪುರ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣವಾಗದೆ ಉಳಿದಿರುವ ಬಂಜಾರ ತಾಂಡಗಳ ಸಂಖ್ಯೆ ಎಷ್ಟು ?*

ಆ) *ವಿದ್ಯುದ್ದೀಕರಣವಾಗದಿರುವುದಕ್ಕೆ ಕಾರಣವೇನು ?*

ಇ) *ಅವುಗಳನ್ನು ಯಾವಾಗ ವಿದ್ಯುದೀಕರಣಗೊಳಿಸಲಾಗುವುದು.*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 8 (ಎಂಟು).

ಆ) ಪ್ರತಿ ವರ್ಷದ ನಿಗದಿತ ಗುರಿಯಂತೆ, ಸೋಲಾಪುರ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣವಾಗದೇ